ಸುಳ್ಳ ಅಂದರು. ಓಡಿಹೋದ ಅಂದರು. ಅವನ ದೊಡ್ಡಮನೆ ಜನ ಹುಡುಕುತ್ತಿದ್ದಾರೆ ಅಂದರು. ಮಾಮಾ ವೈಶಾಲಿಯ ನಾಲ್ಕನೆಯತ್ತೆ ಬೇಸಿಗೆ ರಜೆಗೂ ಐದನೆಯತ್ತೆಗೂ ಆರನೆಯತ್ತೆಗೂ ಬರಲಿಲ್ಲ. ದೊಡ್ಡಮನೆಯಲ್ಲಿ ದೊಡ್ಡ ಜಗಳ ಶುರುವಾಗಿತ್ತು. ದೊಡ್ಡಮನೆಯಲ್ಲಿ ದೊಡ್ಡ ಜನ ಬಂದಿದ್ದರು. ಅಲ್ಲೊಬ್ಬರು ಸತ್ತು ಹೋಗಿದ್ದರಂತೆ. ಜೋಕಾಲಿ ಆಡುವಾಗ ಸತ್ತರಂತೆ. ಅವರು ಅದನ್ನು ಕುತ್ತಿಗೆಗೆ ಸುತ್ತಿಕೊಂಡಿದ್ದರಂತೆ. ಬೇಕಂತಲೆ ಹಂಗೆಲ್ಲ ಮಾಡಿದರಂತೆ. ಅಂತೆಲ್ಲ ಮಾತಾಯಿತು. ವೈಶಾಲಿ ತನ್ನ ಮನೆಯೆದುರು ಮಾಮಾ ಕಟ್ಟಿಕೊಟ್ಟ ಜೋಕಾಲಿ ಆಡುವುದು ಬಿಟ್ಟು, ಅದು ಗಾಳಿಗೆ ತೂಗುವುದನ್ನಷ್ಟೆ ನೋಡುತ್ತ ಕೂತು ಬಿಟ್ಟಳು. ಅವಳ ಅಮ್ಮ ಕೆಮ್ಮ ತೊಡಗಿದಳು. ಅಪ್ಪ ಮನೆಯಲ್ಲಿರುತ್ತಿರಲಿಲ್ಲ. ಒಂದು ದಿನ ಮಾಮನ ಹುಡುಕಿಕೊಂಡು ದೊಡ್ಡಮನೆಯ ಜನರೆಲ್ಲ ಮನೆಗೆ ಬಂದಾಗ ವೈಶಾಲಿಗೆ ವಿಪರೀತ ಜ್ವರ. ಹೊರಗೆ ಜನ ಬಡಿಗೆ ಹಿಡಿದು ನಿಂತಿದ್ದರು. ಅವಳಪ್ಪ ಕೈ ಮುಗಿದು ಬೇಡಿಕೊಳ್ಳುತ್ತಿದ್ದ. ಅವನ್ನ ಕೊಂದಾಕ್ತೀವಿ ಕೊಚ್ಚಾಕ್ತೀವಿ ಅಂತನ್ನುವ ಪದಗಳು ವೈಶಾಲಿಯ ನೆನಪಿನಿಂದ ಮರೆಯಾಗುವ ಮುನ್ನ ದೀರ್ಘ ಕಾಲದ ಜ್ವರ ಬಿಟ್ಟು ಹೋಗುವ ಮುನ್ನ ಅವಳ ಪ್ರಶಾಂತ ಮಾಮಾನ ಯಾರೋ ಕಾಡಿನಲ್ಲಿ ಸಾಯಿಸಿ ಕೊಚ್ಚಿ ನೇತು ಹಾಕಿದ್ದರು. ಹೆಣವನ್ನು ಎತ್ತರದಲ್ಲಿ ಕಟ್ಟಿದ್ದರು. ಇಳಿಸುವ ಧೈರ್ಯ ಯಾರೂ ಮಾಡದೇ ಅದು ಹಳತಾದ ಮರದ ಲಡ್ಡಾದ ರೆಂಬೆಗೆ ಅಲ್ಲಾಡುತ್ತ ವಿಚಿತ್ರ ಭಯ ಕೆರಳಿಸುತ್ತಿತ್ತು. ಆ ಮರವನ್ನೂ ಕಡಿಸಿಬಿಟ್ಟರು. ಆ ಮರ ಮಾರಲು ಹೋಗಿ ಹೀಗಾದ... ಅದು ದೇವರ ಮರ... ಅದು ದೆವ್ವದ ಮರ... ಅವನ ಕೊಂದಿದ್ದಾರೆ... ಅವನೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ... ಅವನಿಗೆ ಮಾಟ ಮಾಡಿಸಿದ್ದಾರೆ... ಅವನಿಗೆ ಮದುವೆಯಾಗಿದೆಯಂತೆ... ಅವನಿಗೆ ಮಗು ಇದೆಯಂತೆ... ಗಾಳಿ ಬೀಸಿದಂತೆ ಮಾತುಗಳು ಬಂದು ಹೋದವು. ವೈಶಾಲಿ ಅಮ್ಮನ ಕಣ್ಣೀರೆಲ್ಲ ಬತ್ತಿ ಹೋದವು. ಶ್ವಾಸಕೋಶದಲ್ಲೊಂದು ಗುಳ್ಳೆ. ಕೆಮ್ಮು ಕೆಮ್ಮು ಕೆಮ್ಮು. ‘ಅವತ್ತು ನೀವು ಹೆಗಡೇರ ತ್ವಾಟ್‌ಕೆ ಹೋಗದೀರೆ ನನ್ನ ತಮ್ಮ ಉಳೀತಿದ್ದ’ ‘ಅವತ್ತು ನಾವು ಅವನ್ನ ಕರಕೊಂಡು ನಮ್ಮೂರಿನ ದೈವ್ಯಕ್ಕೆ ಹೋಗಿದ್ರೆ ಅಂವಾ ಸಾಯ್ತಿರಲಿಲ್ಲ’ ‘ಅವತ್ತು ನೀವು ಅವನು ಹೇಳದಂಗೆ ಭಟ್ರ ಮನಿಗೋಗಿ ಮಾತಾಡಿದ್ರೆ ಅವ ಎಲ್ಲೋ ಬದಿಕ್ಕಂಡ್ ಇರ್ತಿದ್ದ’ ‘ಅವತ್ತು ಅವನ ಹೆಣಾನ ನೀವು ಬೇಗ ಇಳ್ಸಿದ್ರೆ ಲಾಯಕ್ಕಾದ ಸಂಸ್ಕಾರ ಮಾಡೂಕಾದ್ರೂ ಆಗ್ತಿತ್ತ್...’ ‘ಅಂವಾ ನಂಗೆ ಕಾಣೆಸ್ತ... ಅಕ್ಕಾ ಅಕ್ಕಾ ನಾನು ಸಾಯೂದಿಲ್ಲೆ... ನನ್ ಉಳ್ಸ್ಕಳೀ ಮರಾಯ್ತಿ... ಅಂತ ಗೋಗರೀತ...’ಅಂತೆಲ್ಲ ವೈಶಾಲಿ ಅಮ್ಮ ಶುರು ಮಾಡುತ್ತಲೇ ಅವಳಪ್ಪ ಎದ್ದು ಹೋಗುತ್ತಿದ್ದ... ಒಮ್ಮೆ ಬೀಸಿ ಹೊಡೆಯುತ್ತಿದ್ದ... ಒಮ್ಮೆ ಕುಡಿದು ಬರುತ್ತಿದ್ದ... ಒಮ್ಮೆ ಹೋ ಅಂತ ರಾಗ ತೆಗೆದು ಅಳುತ್ತಿದ್ದ. ಸಾವು ಕೆಟ್ಟದ್ದು.. ಸಾಯಬಾರದು... ಜನರ ಸಮಯ ಮುಗಿದೇ ಹೋಗಬಾರದು... ಸಮಯ ಉಳಿಸಿಕೊಳ್ಳಬೇಕು... ಕಟ್ಟಿಕೊಳ್ಳಬೇಕು... ನೋಡುತ್ತಿರಬೇಕು... ನಿಂತುಬಿಡುತ್ತದೆ... ಎಚ್ಚರದಿಂದ ಕಾಯಬೇಕು... ವೈಶಾಲಿ ತನ್ನ ಸಣ್ಣ ಬೈಸಿಕಲ್ಲಿನಲ್ಲಿ ಅಂಗಳದಲ್ಲೇ ಸುತ್ತು ಸುತ್ತು ಸುತ್ತು ಹೊಡೆಯುತ್ತ ಯೋಚಿಸುತ್ತಿರುತ್ತಿದ್ದಳು... ಮಾಮಾ ಸತ್ತ. ಅಲ್ಲ ಮಾಮಾ ದೇವರ ಬಳಿ ಹೋಗಿದ್ದಾನೆ ಅಂತೆಲ್ಲ ಸಾವನ್ನು ಭಿನ್ನವಾಗಿ ಬದಲಾಯಿಸಲ್ಪಡುವ ಅಮ್ಮನ ಮಾತಿನಲ್ಲಿ ಕಳೆದುಹೋದ ವೈಶಾಲಿಗೆ ಈಗೊಂದು ಸಾವನ್ನು ತಡೆಯಬೇಕಿತ್ತು. ವಯಸ್ಸಾದ ಅಜ್ಜ ವಯಸ್ಸಾಗಿ ಸತ್ತು ಹೋಗಿಬಿಡುತ್ತಾನೆಂದು ಹೆದರಿಕೊಂಡಿದ್ದಳು. ಆದರೆ, ಅವನಿಗಿಂತ ಬಹಳ ಸಣ್ಣ ವಯಸ್ಸಿನವರು ಬಹಳ ಜನ ಸತ್ತು ಹೋದದ್ದನ್ನು ಕೇಳಿದ್ದಳು. ಸತ್ತು ಹೋದ ಕಾರಣಗಳನ್ನು ಕೇಳಿ ತಿಳಿದು ನೆನಪಿಟ್ಟುಕೊಂಡಿದ್ದಳು. ಪ್ರೇಮವಂತೆ. ಮದುವೆಯಂತೆ. ಸಾವಂತೆ. ಅದು ಆತ್ಮಹತ್ಯೆಯಂತೆ. ದೊಡ್ಡ ಮನೆಯಲ್ಲಿ ದೊಡ್ಡ ಜೋಕಾಲಿ ಇದೆಯಂತೆ. ಹಗ್ಗವೊಂದು ಇಳಿ ಬಿದ್ದಿರುತ್ತಂತೆ. ಅಲ್ಲಿ ಈಗಲೂ ಯಾರೋ ಖಾಲಿ ಜೋಕಾಲಿ ಆಡುತ್ತಿರುತ್ತಾರಂತೆ. ಅದು ಗಾಳಿಯಾಗಿ ಬೀಸುತ್ತ ಬರುತ್ತದಂತೆ. ವೈಶಾಲಿಗೆ ಒಮ್ಮೊಮ್ಮೆ ಭಯ. ಒಮ್ಮೊಮ್ಮೆ ಅಭಯ. ಇದು ನನ್ನ ಮಾಮಾ. ಇದು ನನ್ನ ಮಾಮಾನ ಹೆಂಡತಿ. ಇದು ನನ್ನ ಮಾಮಾನ ಮಗಳು. ಹೀಗೆ. ಬೈಸಿಕಲ್ಲು ಪೆಡಲ್ಲು

